ದಿನಾಂಕ_06.03.2026_ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು:- 10ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಕೆ.ಪಿ ರವರಿಂದ:-**

ನಾನು ಕಳೆದ 13 ವರ್ಷಗಳಿಂದ ವಕೀಲ ವೃತ್ತಿಯನ್ನು ಮಾಡುತ್ತಿದ್ದೇನೆ. ದಿನಾಂಕ 26.10.2013 ರಲ್ಲಿ ನಾನು ಹಿರಿಯ ವಕೀಲರಾದ ಎಸ್.ಡಿ ಕಾವೇರಪ್ಪರವರ ಕಛೇರಿಯಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿರುತ್ತೇನೆ. ನಿ.ಪಿ-19 ದಾಖಲೆಯನ್ನು ನಾನು ತಯಾರಿಸಿರುವುದಿಲ್ಲ. ಸದರಿ ದಾಖಲೆಗೆ ನಾನು ನನ್ನ ಸಹಿಯನ್ನು ಮಾಡಿ, ಮೊಹರನ್ನು ಹಾಕಿರುತ್ತೇನೆ. ನಿ.ಪಿ-19 ದಾಖಲೆಯನ್ನು ಪತ್ರ ಬರಹಗಾರರಾದ ಜಯಂತಿರವರು ತಯಾರಿಸಿರುತ್ತಾರೆ. ಸದರಿ ದಾಖಲೆಯನ್ನು ಜಯಂತಿರವರು ತಯಾರಿಸಿದ ಬಗ್ಗೆ ನಿ.ಪಿ 19 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.

ನಿ.ಪಿ-19 ದಾಖಲೆಗೆ ನಾನು ಸಹಿ ಮಾಡುವ ಸಂದರ್ಭದಲ್ಲಿ ಮಾರಾಟಗಾರರು, ಖರೀದಿದಾರರು ಹಾಗೂ ಸಾಕ್ಷಿದಾರರು ನನ್ನ ಸಮಕ್ಷಮ ಹಾಜರಿದ್ದರು. ನಾನು ನಿ.ಪಿ-19 ದಾಖಲೆಗೆ ಜಯಂತಿ ರವರ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ. ಆ ಸಂದರ್ಭದಲ್ಲಿ ಜಯಂತಿ ರವರು ಕಛೇರಿಯಲ್ಲಿ ಇದ್ದರು. ಮಾರಾಟಗಾರರು ಮತ್ತು ಖರೀದಿದಾರರು ನಿ.ಪಿ-19 ದಾಖಲೆಗೆ ನನ್ನ ಸಮಕ್ಷಮ ಸಹಿ ಮಾಡಿರುವುದಿಲ್ಲ. ನಾನು ನಿ.ಪಿ-19 ರ ದಾಖಲೆಯಲ್ಲಿನ ಒಕ್ಕಣೆಗಳನ್ನು ಮಾರಾಟಗಾರರು ಮತ್ತು ಖರೀದಿದಾರರ ಸಮಕ್ಷಮ ಓದಿ, ಸಹಿ ಮಾಡಿರುತ್ತೇನೆ.

ಮಾರಾಟಗಾರರಿಗೆ ನಿ.ಪಿ-19 ರ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ವಿಭಾಗದ ಮೂಲಕ ಬಂದಿದ್ದು, ಮಾರಾಟ ಮಾಡುವ ಸಂಪೂರ್ಣ ಹಕ್ಕು

ಅವರಿಗೆ ಇರುವುದಾಗಿ ಕ್ರಯಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ನಿ.ಪಿ-20 ದಾಖಲೆಯನ್ನು ನಾನು ನೋಡಿರುವ ಬಗ್ಗೆ ನನಗೆ ಈಗ ನೆನಪಿಲ್ಲ. ಸಾಮಾನ್ಯವಾಗಿ ಒಂದು ದಸ್ತಾವೇಜನ್ನು ತಯಾರಿಸುವ ಸಂದರ್ಭದಲ್ಲಿ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ಸದರಿ ದಾಖಲೆಗಳು ಸರಿಯಾಗಿರುವುದನ್ನು ಖಾತರಿಪಡಿಸಿಕೊಂಡು, ದಸ್ತಾವೇಜಿಗೆ ಸಹಿ ಮಾಡುತ್ತೇನೆ ಎಂದರೆ ಸರಿ.

ಖರೀದಿದಾರರು ಮಾರಾಟಗಾರರಿಗೆ ಪ್ರತಿಫಲದ ಹಣವನ್ನು ನನ್ನ ಸಮಕ್ಷಮ ನೀಡಿರುವುದಿಲ್ಲ. ನಾನು ನಿ.ಪಿ-19 ದಾಖಲೆಯನ್ನು ನೋಂದಣಿ ಮಾಡಿಸಲು ಉಪನೋಂದಣಾಧಿಕಾರಿಯವರ ಕಛೇರಿಗೆ ಹೋಗಿರುವುದಿಲ್ಲ. ನಿ.ಪಿ-19 ದಾಖಲೆಯನ್ನು ನಾನು ಮತ್ತು ನನ್ನ ಹಿರಿಯ ವಕೀಲರು ಕಛೇರಿಯಲ್ಲಿ ತಯಾರಿಸಿದ್ದರೂ ಸಹಾ ಜಯಂತಿರವರ ಕಛೇರಿಯಲ್ಲಿ ತಯಾರಿಸಿದುದ್ದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-19 ದಾಖಲೆಗೆ ಸಹಿ ಮಾಡುವ ಮೊದಲು ವಿಭಾಗ ಪತ್ರದ ದಾಖಲೆಗಳನ್ನು ನಾನು ಪರಿಶೀಲಿಸಿದ್ದ ಬಗ್ಗೆ ನನಗೆ ಈಗ ನೆನಪಿಲ್ಲ. 2 ರಿಂದ 5 ನೇ ಮಾರಾಟಗಾರರು 1 ನೇ ಮಾರಾಟಗಾರರಿಗೆ ಯಾವ ರೀತಿಯಲ್ಲಿ ಸಂಬಂಧವನ್ನು ಹೊಂದಿದ್ದರು ಎಂಬುದು ನನಗೆ ಗೊತ್ತಿಲ್ಲ. ನಿ.ಪಿ-19 ದಾಖಲೆಯನ್ನು ನಾನೇ ತಯಾರಿಸಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:-</u> ಇಲ್ಲ.

ಪ್ರತಿವಾದಿ 1 ರಿಂದ 4, 6 ರಿಂದ 9 ರವರ ಪರ ವಕೀಲರುಗಳು ಗೈರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.